

ಬಳ್ಳಿಗಳೊಂದಿಗೆ, ಹರಿವೆ, ಕೆಸು, ಪಾಲಕ್ ಗಿಡಗಳೊಂದಿಗೆ ಮಾತಾಡುವುದು ಸಾಮಾನ್ಯವಾಗಿತ್ತು.

ಅಂತೂ ಮುಂಬಯಿಯ ಜನರು ಅಪ್ಪಾ ಸಾಹೇಬರು ಓರ್ವ ಸಂತನೆಂದೇ ಭಾವಿಸುವಂತಾಗಿತ್ತು. ಅವರು ಎಂದೂ ತಮ್ಮ ಆದರ್ಶಗಳನ್ನು ಪಾಲಿಸುವಂತೆ ಜನಸಾಮಾನ್ಯರಿಗೆ ಬೋಧಿಸುತ್ತಿರಲಿಲ್ಲ. ಎಲ್ಲರಿಗೂ ಉಪಕಾರಿಯಾಗಿ, ಸರಳ ಜೀವನವನ್ನು ಹೇಗೆ ನಡೆಸಬಹುದು ಎನ್ನುವುದನ್ನು ತಮ್ಮ ಜೀವನಶೈಲಿಯಿಂದಲೇ ತೋರಿಸಿಕೊಡುತ್ತಿದ್ದರು. ನಿರುಪದ್ರವಿಯಾಗಿ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿದ್ದ ಅವರನ್ನು ಎಲ್ಲರೂ ಗೌರವಿಸುತ್ತಿದ್ದರು.

ತಮ್ಮ ಆಸ್ಪತ್ರೆ ಬೆಡ್‌ನಲ್ಲಿ ಅಪ್ಪಾ ಸಾಹೇಬರು ಅದೇಕೋ ಹಳೆಯ ಘಟನೆಗಳ ಕುರಿತು ಯೋಚಿಸತೊಡಗಿದರು. ಅವರು ಸೇರಿಕೊಂಡದ್ದು ಸರಕಾರಿ ಆಸ್ಪತ್ರೆಯನ್ನು. ಅವರದೇ ಮಲ್ಟಿ ಸ್ಪೆಶಾಲಿಟಿ ಆಸ್ಪತ್ರೆ ಇದ್ದರೂ ಅಲ್ಲಿ ಫೈವ್ ಸ್ಟಾರ್ ಸೌಲಭ್ಯಕ್ಕಿಂತಲೂ ಹೆಚ್ಚಿನ ಆರೈಕೆ ಅವರಿಗೆ ದೊರೆಯಬಹುದಾಗಿದ್ದರೂ ಅವರು ಆಯ್ದುಕೊಂಡದ್ದು ಸರಕಾರಿ ಆಸ್ಪತ್ರೆಯನ್ನು.

ಅಪ್ಪಾ ಸಾಹೇಬರು ತೊಂಬತ್ತೈದರ ಆಸುಪಾಸಿನಲ್ಲಿ ಇದ್ದಿರಬೇಕೆಂದು ಅವರದ್ದೇ ಅಂದಾಜು. ಅವರ ಬಳಿ ಜಾತಕವಾಗಲಿ, ಜನ್ಮಪತ್ರವಾಗಲಿ ಇದ್ದಿರಲಿಲ್ಲ. ಆದರೂ ಒಂದು ತರಹೆಯ ಲೆಕ್ಕಾಚಾರ ಮಾಡಿ ತಮ್ಮ ವಯಸ್ಸನ್ನು ಊಹಿಸಿಕೊಂಡಿದ್ದರು. ಅವರ ಬಳಿ ಈ ತನಕದ ಯಾವುದೇ ಅನಾರೋಗ್ಯದ ಸಮಸ್ಯೆ ಸುಳಿದಿರಲಿಲ್ಲ. ಈಗಲೂ ಅಷ್ಟೆ. ಆದರೆ, ಒಂದು ದಿನ ಗಿಡಗಳಿಗೆ ನೀರುಣಿಸುವಾಗ ಅದೇಕೊ ತಲೆಸುತ್ತು ಬಂದಂತಾಯಿತು. ನಿಂಬೆ ಹಣ್ಣಿನ ಪಾನಕ ಮಾಡಿ ಕುಡಿದರು. ಪ್ರಾಣಾಯಾಮ ಮಾಡಲು ಯತ್ನಿಸಿದರು. ಅದೇಕೋ ಯಶಸ್ವಿಯಾಗಲಿಲ್ಲ. ಶವಾಸನ ಮಾಡಿದರು. ಊಹ್ಞು. ತಲೆಸುತ್ತು ನಿಲ್ಲಲಿಲ್ಲ. ಅವರು ಅಪರೂಪಕ್ಕೆ ಸಂದರ್ಶಿಸುತ್ತಿದ್ದ ಡಾ. ಗಿಂಡೆಯವರ ಕ್ಲಿನಿಕ್‌ಗೆ ಹೋಗಿ ಡಾಕ್ಟರರಲ್ಲಿ ಸಮಸ್ಯೆ ಹೇಳಿದರು. ಪ್ರಾಥಮಿಕ ತಪಾಸಣೆ ನಡೆಸಿದ ಡಾಕ್ಟರರು ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ಒಳ್ಳೆಯದು, ಈ ವಯಸ್ಸಿನಲ್ಲಿ ಇಂತಹ ಅನಾರೋಗ್ಯ ಲಕ್ಷಣಗಳನ್ನು ಕಡೆಗಣಿಸಬಾರದು ಎಂದು ಸಲಹೆ ನೀಡಿದಾಗ ಅಪ್ಪಾ ಸಾಹೇಬರು ಸರಕಾರಿ ಆಸ್ಪತ್ರೆಗೆ ಸೇರಿಕೊಂಡರು. ಡಾ. ಗಿಂಡೆಯವರು ಅಪ್ಪಾ ಸಾಹೇಬರನ್ನು ನೀವೇಕೆ ನಿಮ್ಮದೇ ಆಸ್ಪತ್ರೆಗೆ ಎಡ್ಮಿಟ್ ಆಗಬಾರದು. ಅಲ್ಲಿ ಎಲ್ಲ ಸೌಲಭ್ಯವೂ ಇದೆಯಲ್ಲ? ಎಂದು ಕೇಳಿದಾಗ ಅಪ್ಪಾ ಸಾಹೇಬರು ನಾನು ಭಾರತದ ಸಾಮಾನ್ಯ ಪ್ರಜೆ. ಜನಸಾಮಾನ್ಯರು ಯಾವ ಆಸ್ಪತ್ರೆಗೆ ಹೋಗುತ್ತಾರೊ ಅಲ್ಲಿಗೇನೆ ಹೋಗುವುದು ನನಗೆ ಇಷ್ಟ. ಎಂದು ತಾನು ಸರಕಾರಿ ಆಸ್ಪತ್ರೆ ಆಯ್ದುಕೊಂಡದ್ದನ್ನು ಸಮರ್ಥಿಸಿಕೊಂಡರು. ಡಾ. ಗಿಂಡೆ ಈ ಮನುಷ್ಯನ ಆದರ್ಶದ ಬಗ್ಗೆ ಮೂಕವಿಸ್ಮಿತರಾದರು.

ತಮ್ಮ ಹಾಸಿಗೆಯಲ್ಲಿ ಕೈಗೆ ಪೈಪು ಅಂಟಿಸಿಕೊಂಡು ಮಲಗಿದ ಅಪ್ಪಾ ಸಾಹೇಬರು ವಾರ್ಡ್‌ನ ಡಾಕ್ಟರರು ಬಂದಾಗ ಏಳಲು ಯತ್ನಿಸಿದರು. ಡಾಕ್ಟರರು ಅವರನ್ನು ಮಲಗಲು ಹೇಳಿ, ''ಎಷ್ಟು ದಿನ ಉಪವಾಸವಿದ್ದೀರಿ. ಮಿ. ಕಾಮಥ್'' ಎಂದು ಕೇಳಿದರು. ತಮ್ಮ ನಿಜವಾದ ಹೆಸರಿನ ಉಪನಾಮ ಕೇಳಿಸಿಕೊಂಡ ಅಪ್ಪಾ ಸಾಹೇಬರು ಅರೆಕ್ಷಣ ಚಕಿತಗೊಂಡರೂ ಎಡ್ಮಿಷನ್ ಪೇಪರ್‌ನಲ್ಲಿ ತನ್ನ ಸರಿಯಾದ ಹೆಸರು ನಮೂದಿತವಾಗಿದ್ದುದನ್ನು ನೆನಪಿಸಿಕೊಂಡು, ಡಾಕ್ಟರರ ಪ್ರಶ್ನೆಗೆ ಉತ್ತರವಾಗಿ, ''ಒಂದು ಮೂರು ನಾಲ್ಕು ದಿನ ಆಗಿರಬಹುದು'' ಎಂದರು. ''ನಿಮಗೆ ಹೈಪೊಗ್ಲೈಸೀಮಿಯಾ (ರಕ್ತದಲ್ಲಿ ಗ್ಲುಕೋಸ್ ಅಂಶದ ತೀವ್ರ ಇಳಿಕೆ) ಹಾಗೂ ಸ್ವಲ್ಪ ಡಿ–ಹೈಡ್ರೇಶನ್ ಆಗಿದೆ ಸರ್. ಉಪವಾಸ ಈ ವಯಸ್ಸಿನಲ್ಲಿ ಒಳ್ಳೆಯದಲ್ಲ. ಈ ಉಪವಾಸ ಏಕೆ ಕೈಗೊಂಡಿರಿ ಕೇಳಬಹುದೆ?'' ಡಾಕ್ಟರರು ಕೇಳಿದ್ದಕ್ಕೆ ಅಪ್ಪಾ ಸಾಹೇಬರು ವಿಷಣ್ಣರಾಗಿ ನುಡಿದರು. ''ಪ್ರಾಯಶ್ಚಿತ್ತ ಏಕೆಂದು ಕೇಳಬೇಡಿ'' ಎಂದು ಕೈಮುಗಿಯಲು ಹೋದಾಗ, ಕೈಗೆ ತೊಡಿಸಿದ ಡ್ರಿಪ್‌ನ ಪೈಪ್ ಕಿತ್ತು ಬಂತು. ಡಾಕ್ಟರರು ಅದನ್ನು ಸರಿಪಡಿಸಿ, ಮುಂದಿನ ಬೆಡ್‌ನತ್ತ ಸಾಗಿದಾಗ ಅಲ್ಲಿದ್ದ ನರ್ಸ್ ಪಿಸುಮಾತಿನಲ್ಲಿ